ಶ್ರೀ ಜೆ. ಹೆಚ್. ಪಟೇಲ್.—(ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೭೦ ವರ್ಷಗಳು.

ಆ) ಗಂಧದ ಎಣ್ಣೆ ಹಾಗೂ ಅದರ ಉತ್ಪನ್ನಗಳ ಮಾರಾಟದಿಂದ ಗಳಿಸಿದ ಹಣ ಈ ಕೆಳಗಿನಂತಿದೆ.

ವರ್ಷ	ಹಣ ಲಕ್ಷ ರೂ.ಗಳಲ್ಲಿ
೧೯೮೩-೮೪	೩೬೭.೭೧
೧೯೮೪-೮೫	೩೧೭.೩೧
೧೯೮೫-೮೬	೪೮೧.೩೭

ಇ) ಎಣ್ಣೆ ತೆಗೆದಾಗ ಮೇಲೆ ಉಳಿಯುವ ಪುಡಿಯನ್ನು ಕರ್ನಾಟಕ ಸಾಬೂನು ಮತ್ತು ಪಾರ್ಜಕ ನಿಯಮಿತದಲ್ಲಿ ಅಗರಬತ್ತಿ ತಯಾರಿಕೆಗೆ ಉಪಯೋಗಿಸಲಾಗುತ್ತಿದೆ. ಉಳಿದ ಪುಡಿಯನ್ನು ಖಾಸಗಿ ಅಗರ ಬತ್ತಿ ತಯಾರಿಕರಿಗೆ ಮಾರಾಟ ಮಾಡುವ ಮೂಲಕ ಹಾಗೂ ಹೊರದೇಶಕ್ಕೆ ರಫ್ತು ಮಾಡುವ ಮೂಲಕ ವಿತರಣೆ ಮಾಡಲಾಗುತ್ತಿದೆ.

ಮಂಗಳೂರು ಹಾಗೂ ಕುಂದಾಪುರ ಅರಣ್ಯ ವಿಭಾಗದಲ್ಲಿ ಹಾಲು ಮಡ್ಡಿ ತೆಗೆಯುವ ಬಗ್ಗೆ

೧೧೧೮. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ಹಾಗೂ ಕುಂದಾಪುರ ಅರಣ್ಯ ವಿಭಾಗಗಳಲ್ಲಿ ''ಹಾಲುಮಡ್ಡಿ'' ತೆಗೆಯುವ ಸಲುವಾಗಿ ಯಾರಿಗೆ ಗುತ್ತಿಗೆ ನೀಡಲಾಗಿದೆ.

ಆ) ಗುತ್ತಿಗೆಯ ಅವಧಿ ಎಷ್ಟು ಹಾಗೂ ಯಾವ ಆಧಾರದ ಮೇಲೆ ಗುತ್ತಿಗೆ ನೀಡಲಾಯಿತು?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಮಂಗಳೂರು ಅರಣ್ಯ ವಿಭಾಗದಲ್ಲಿ ಹಾಲು ಮಡ್ಡಿ ತೆಗೆಯುವ ಸಲುವಾಗಿ ಈ ಕೆಳಕಂಡಂತೆ ಗುತ್ತಿಗೆ ನೀಡಲಾಗಿದೆ.

೧ ಪುತ್ತೂರು ವಲಯ : ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ, ಪುತ್ತೂರು.

೨ ಪಂಜ ವಲಯ : ಸುಳ್ಯ ತಾಲ್ಲೂಕು ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ, ನಿಯಮಿತ, ಸುಳ್ಯ.

೩ ಸುಬ್ರಹ್ಮಣ್ಯ ವಲಯ : ಹರಿಹರ ಪಲ್ಲಡಕ ಹರಿಜನ ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘ, ನಿಯಮಿತ, ಹರಿಹರ ಪಲ್ಲಡಕ (ದ.ಕ.)

೪ ಉಪ್ಪಿನಂಗಡಿ ಹಾಗೂ ಬೆಳ್ತಂಗಡಿ ವಲಯ : ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ, ನಿಯಮಿತ, ಬೆಳ್ತಂಗಡಿ.

ಕುಂದಾಪುರ ಅರಣ್ಯ ವಿಭಾಗದಲ್ಲಿ ಹಾಲು ಮಡ್ಡಿ ತೆಗೆಯುವ ಸಲುವಾಗಿ ಈ ಕೆಳಕಂಡಂತೆ ಗುತ್ತಿಗೆ ನೀಡಲಾಗಿದೆ.

೧ ಹೆಬ್ರಿ ವಲಯ: ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ ಉಡುಪಿ.

೨ ಕಾರ್ಕಳ ವಲಯ : ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ, ಕಾರ್ಕಳ.

೩ ಮೂಡಬಿದ್ರಿ ವಲಯ : ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ, ಕಾರ್ಕಳ.

೪ ವೇಣೂರು ವಲಯ : ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ, ಕಾರ್ಕಳ.

೫ ಬೈಂದೂರು ವಲಯ : ಕುಂದಾಪುರ ತಾಲ್ಲೂಕು ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ, ಕಾರ್ಕಳ.

೬ ಕುಂದಾಪುರ ಮತ್ತು } ದಕ್ಷಿಣ ಕನ್ನಡ ಎಸ್.ಸಿ.
೭ ಶಂಕರನಾರಾಯಣ ವಲಯ } ಎಸ್.ಟಿ. ಫಾರೆಸ್ಟ್
ಪ್ರೊಡ್ಯೂಸ್ ಆಂಡ್ ಸೇಲ್ಸ್ ವರ್ಕರ್ಸ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಮಂಗಳೂರು.

೮) ಗುತ್ತಿಗೆ ಅವಧಿಯು ಮೂರು ವರ್ಷವಾಗಿರುತ್ತದೆ (೧೯೮೪-೮೭)

ಸರ್ಕಾರಿ ಆಜ್ಞೆ ಸಂಖ್ಯೆ :

೧ ಎಫ್. ಎಫ್. ಡಿ. ೨೬೪ ಎಫ್. ಎ. ಡಿ. ೭೫ ದಿನಾಂಕ ೭-೧-೧೯೭೫
೨ ,, ೧೫೯ ಎಫ್. ಡಿ. ಪಿ. ೮೨ ,, ೧೪-೧೨-೧೯೮೨
೩ ,, ೧೭೫ ,, ೮೨ ,, ೧೨-೧-೧೯೮೩
೪ ,, ೧೪೨ ,, ೮೪ ,, ೨೪-೧೦-೧೯೮೪ ಮತ್ತು
೫ ,, ೨೩೧ ,, ೮೬ ,, ೮-೧೨-೧೯೮೬ ರ ಆಧಾರದ ಮೇಲೆ ಗುತ್ತಿಗೆ ನೀಡಲಾಯಿತು.

ಕಾಪು ಕ್ಷೇತ್ರದಲ್ಲಿ ಕೈಗಾರಿಕಾ ಕ್ಷೇತ್ರ ನಿರ್ಮಾಣದ ಬಗ್ಗೆ.

೧೦೯೬. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದಲ್ಲಿ ಕೈಗಾರಿಕಾ ಕ್ಷೇತ್ರವೊಂದನ್ನು ಸ್ಥಾಪಿಸುವ ಉದ್ದೇಶ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಅದಕ್ಕೆ ಬೇಕಾಗುವಂತಹ ಸರ್ಕಾರಿ ಜಾಗದ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ ?

ಇ) ಹಾಗಿದ್ದಲ್ಲಿ, ಸದರಿ ಕೈಗಾರಿಕಾ ಕ್ಷೇತ್ರವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಇಲ್ಲ.

ಆ) ಮತ್ತು

ಇ) ಉದ್ಭವಿಸುವುದಿಲ್ಲ.

ಕಾಪು ಕ್ಷೇತ್ರದ ಪೊಲಿಪುವಿನಲ್ಲಿ ಜಟ್ಟಿಯನ್ನು ಕಟ್ಟುವ ಬಗ್ಗೆ.

೧೦೯೭. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ರೇಷ್ಮೆ, ಪಶುಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದ ಪೊಲಿಪು ಎಂಬಲ್ಲಿ ಮೀನುಗಾರಿಕೆಗೆ ಸಹಾಯಕವಾಗಿ ಒಂದು ಜಟ್ಟಿಯನ್ನು ನಿರ್ಮಾಣ ಮಾಡಲು ಸರ್ಕಾರದವರು ಯೋಚಿಸುತ್ತಿದ್ದಾರೆಯೇ ?

ಆ) ಹಾಗಿದ್ದಲ್ಲಿ ಈ ಕಾರ್ಯವನ್ನು ಎಂದು ಪ್ರಾರಂಭಿಸಲಾಗುವುದು ?